

**ಯೂಗೆನ್ ಸ್ಯಾಂಡೋ ದೇಹ ಪ್ರದರ್ಶನವನ್ನು ಒಂದು ಕಲೆ ಎಂಬಂತೆ ಮೊದಲಿಗೆ ಪ್ರತಿಪಾದಿಸಿದ. 'ಆಧುನಿಕ ಬಾಡಿಬಿಲ್ಡಿಂಗ್‌ನ ಪಿತಾಮಹ' ಎಂದೇ ಆತನನ್ನು ಕರೆಯುತ್ತಾರೆ. ಅವನು ಫ್ಲೊರೆನ್ಸ್ ಜೀಗ್‌ಫೀಲ್ಡ್ ಎಂಬ ವ್ಯವಸ್ಥಾಪಕನ ನೆರವಿನಿಂದ ದೊಡ್ಡದೊಂದು ವೇದಿಕೆ ನಿರ್ಮಿಸಿದ. ಅದರ ಮೇಲೆ ನಿಂತು ತನ್ನ ಬಲಾಢ್ಯ ದೇಹದ ಸ್ನಾಯುಗಳ ರೂಪುರೇಷೆಯನ್ನು ಇಂಚಿಂಚಾಗಿ ವಿವಿಧ ಭಂಗಿಗಳಲ್ಲಿ ತೋರುತ್ತಾ ನಿಲ್ಲುತ್ತಿದ್ದ. ಅದನ್ನು ನೋಡಲು ನಿಧ ನಿಧಾನವಾಗಿ ಪ್ರೇಕ್ಷಕರೂ ಹುಟ್ಟಿಕೊಂಡರು.**

ಕೋನಿಂಗ್ಸ್‌ಬರ್ಗ್‌ನ (ಈಗಿನ ರಷ್ಯಾದ ಕಲಿನಿನ್‌ಗ್ರಾಡ್) ಯೂಗೆನ್ ಸ್ಯಾಂಡೋ ದೇಹ ಪ್ರದರ್ಶನವನ್ನು ಒಂದು ಕಲೆ ಎಂಬಂತೆ ಮೊದಲಿಗೆ ಪ್ರತಿಪಾದಿಸಿದ. 'ಆಧುನಿಕ ಬಾಡಿಬಿಲ್ಡಿಂಗ್‌ನ ಪಿತಾಮಹ' ಎಂದೇ ಆತನನ್ನು ಕರೆಯುತ್ತಾರೆ. ಎಲ್ಲರೂ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಸ್ವಲ್ಪ ಹೊತ್ತು ಹುರಿಗಟ್ಟಿಸಿದ ತಮ್ಮ ಸ್ನಾಯುಗಳನ್ನು ವಿವಿಧ ಭಂಗಿಗಳಲ್ಲಿ ನಿಂತು ತೋರುತ್ತಿದ್ದರು.

ಸ್ಯಾಂಡೋ ಈ ವಿಷಯದಲ್ಲಿ ಕೆಲವು ಹೆಜ್ಜೆಗಳನ್ನು ಇನ್ನೂ ಮುಂದಿಟ್ಟ. ಅವನು ದೇಹದಾರ್ಢ್ಯ ಸ್ಪರ್ಧೆ ಇಲ್ಲದೇ ಇರುವಾಗಲೂ ವಿಶೇಷ ಪ್ರದರ್ಶನಗಳನ್ನು ಏರ್ಪಡಿಸಿದ. ಫ್ಲೊರೆನ್ಸ್ ಜೀಗ್‌ಫೀಲ್ಡ್ ಎಂಬ ವ್ಯವಸ್ಥಾಪಕನ ನೆರವಿನಿಂದ ದೊಡ್ಡದೊಂದು ವೇದಿಕೆ ನಿರ್ಮಿಸಿದ. ಅದರ ಮೇಲೆ ನಿಂತು ತನ್ನ ಬಲಾಢ್ಯ ದೇಹದ ಸ್ನಾಯುಗಳ ರೂಪುರೇಷೆಯನ್ನು ಇಂಚಿಂಚಾಗಿ ವಿವಿಧ ಭಂಗಿಗಳಲ್ಲಿ ತೋರುತ್ತಾ ನಿಲ್ಲುತ್ತಿದ್ದ. ಅದನ್ನು ನೋಡಲು ನಿಧ ನಿಧಾನವಾಗಿ ಪ್ರೇಕ್ಷಕರೂ ಹುಟ್ಟಿಕೊಂಡರು.

ಕ್ರಮೇಣ ಅವನ ದೇಹ ಪ್ರದರ್ಶನದ ಮೋಹ ಹೆಚ್ಚಿತು. ಕೆಲವು ಪ್ರತಿಷ್ಠಿತ ದೇಹದಾರ್ಢ್ಯ ಸ್ಪರ್ಧೆಗಳು ನಡೆದಾಗ, ಪಕ್ಕದಲ್ಲೇ ಇನ್ನೊಂದು ವೇದಿಕೆ ನಿರ್ಮಿಸಿಕೊಂಡು ಅಲ್ಲಿ ಸ್ಯಾಂಡೋ ವಿಶೇಷ ಪ್ರದರ್ಶನ ನೀಡುತ್ತಿದ್ದ. ದೇಹದಾರ್ಢ್ಯ ಸ್ಪರ್ಧೆ ನೋಡಲು ಬರುತ್ತಿದ್ದವರಿಗಿಂತ ಹೆಚ್ಚು ಜನ ಇವನ ಪ್ರದರ್ಶನ ನೋಡಲೆಂದು ಸೇರುತ್ತಿದ್ದುದು ವಿಶೇಷ. ಸ್ಯಾಂಡೋ ಜನಪ್ರಿಯತೆ ಯಾವ ಮಟ್ಟಕ್ಕೆ ಬೆಳೆಯಿತೆಂದರೆ, ಅವನ ದೇಹಸಿರಿಯ ಕಥಾನಕವನ್ನೊಳಗೊಂಡ 'ದಿ ಗ್ರೇಟ್ ಜೀಗ್‌ಫೀಲ್ಡ್' ಎಂಬ ಸಿನಿಮಾ 1936ರಲ್ಲಿ ತೆರೆಕಂಡಿತು. ಆಸ್ಕರ್ ಪ್ರಶಸ್ತಿಯೂ ಸಂದ ಈ ಸಂಗೀತಮಯ ಚಿತ್ರದಲ್ಲಿ ನ್ಯಾಟ್ ಪೆಂಡಲ್‌ಟನ್ ಎಂಬುವನು ಸ್ಯಾಂಡೋ ಪಾತ್ರ ನಿಭಾಯಿಸಿದ್ದ.

ಆ ಪಾತ್ರ ನಿರ್ವಹಣೆಗಾಗಿ ಅವನು ಎರಡು ವರ್ಷ ಸತತವಾಗಿ ಮೊದಲೇ ಹುರಿಗಟ್ಟಿದ್ದ ತನ್ನ ಮೈಯನ್ನು ಇನ್ನೂ ದಂಡಿಸಿ ಸ್ಯಾಂಡೋ ದೇಹಾಕಾರಕ್ಕೆ ಹೋಲುವಂತೆ ಮಾರ್ಪಡಿಸಿಕೊಂಡಿದ್ದುದು ದೊಡ್ಡ ಸುದ್ದಿಯಾಗಿತ್ತು.

ಯೂಗೆನ್ ಸ್ಯಾಂಡೋ ದೇಹದ ಬಗ್ಗೆ ಜನ ಅಷ್ಟೆಲ್ಲಾ ಮಾತನಾಡಿದ್ದು ಯಾಕೆಂದರೆ, ಗ್ರೀಕ್ ಹಾಗೂ ರೋಮನ್ ವೀರರ ಪ್ರತಿಮೆಗಳಲ್ಲಿ ಇರುತ್ತದಲ್ಲ, ಅಂಥದ್ದೇ ದೇಹಾಕಾರ ಅವನಿಗಿತ್ತು. ಇಂಥ ದೇಹವನ್ನು ದೇಹದಾರ್ಢ್ಯ ನಿಷ್ಣಾತರು 'ಗ್ರೇಸಿಲಿಯನ್' ಎಂದೇ ಕರೆಯುತ್ತಿದ್ದರು.

1901ರ ಸೆಪ್ಟೆಂಬರ್ 14ರಂದು ಸ್ಯಾಂಡೋ ಮೊದಲ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಿದ್ದು. ಅದನ್ನು 'ಗ್ರೇಟ್ ಕಾಂಪಿಟಿಷನ್' ಎಂದು ಕರೆದ. ಲಂಡನ್‌ನ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ ನಡೆದ ಆ ಸ್ಪರ್ಧೆಯಲ್ಲಿ ಖುದ್ದು ಸ್ಯಾಂಡೋ, ಚಾರ್ಲ್ಸ್ ಲಾಸ್ ಹಾಗೂ ಸರ್ ಆರ್ಥರ್ ಕೋನನ್ ಡಾಯ್ಲ್ ತೀರ್ಪುಗಾರರಾಗಿದ್ದರು. ಇಂಗ್ಲೆಂಡ್‌ನ ವಿಲಿಯಮ್ ಎಲ್. ಮುರ್ರೆ ಆ ಸ್ಪರ್ಧೆಯ ವಿಜೇತ.

ಅವನಿಗೆ ಸ್ಯಾಂಡೋ ತನ್ನದೇ ಕಂಚಿನ ಪ್ರತಿಮೆ ಮಾಡಿಸಿ ಪ್ರಶಸ್ತಿಯ ರೂಪದಲ್ಲಿ ನೀಡಿದ. ಈಗ ಅದೇ ಸ್ಪರ್ಧೆ 'ಮಿಸ್ಟರ್ ಒಲಿಂಪಿಯಾ' ಆಗಿದೆ. 1977ರಲ್ಲಿ

